ಕರ್ನಾಟಕವಿಧಾನಪರಿಷತ್
151ನೇ ಅಧಿವೇಶನ-2023

| ನಿಯಮ-330ರಡಿಯ ಸೂಚನೆ | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು |

**ಸೂಚನೆಯ ವಿಷಯ**

ರಾಜ್ಯದ ವಿವಿಧ ಪರಿಸರ ಜಾಗೃತಿ ಕಾರ್ಯಕ್ರಮಗಳಿಗೆ ಮಂಜೂರಾತಿ ನೀಡುವಲ್ಲಿ ಟಿ.ಟಿ.ಪಿ.ಕಾಯ್ದೆಯನ್ನು ಉಲ್ಲಂಘಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು ಅಕ್ರಮದಲ್ಲಿ ಭಾಗಿಯಾಗಿರುವ ಗಂಭೀರ ಸಮಸ್ಯೆ ಕುರಿತು

**ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ**

ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣ ಕುರಿತು ಅರಿವು / ಜಾಗೃತಿ ಮೂಡಿಸಲು ಹಮ್ಮಿಕೊಳ್ಳಲಾದ ಕಾರ್ಯಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಉಪಬಂಧಗಳನ್ನು ಉಲ್ಲಂಘನೆ ಮಾಡಿರುವ ಬಗ್ಗೆ ತನಿಖೆ ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:**ಅಪಜೀ 169 ಇಪಿಸಿ 2023, ದಿನಾಂಕ:26.07.2023**ರನ್ವಯ ತನಿಖಾಧಿಕಾರಿಯನ್ನಾಗಿ ನೇಮಿಸಲಾದ ಶ್ರೀಮಹದೇವ, ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋದನೆ ಮತ್ತು ಲೆಕ್ಕ ಪತ್ರ ಇಲಾಖೆ ಇವರಿಂದ ತನಿಖೆ ನಡೆಸಿ ಪಡೆಯಲಾಗಿರುವ ವರದಿಯಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಲಿ ಅಧ್ಯಕ್ಷರು ನಿಯಮಗಳ ಉಲ್ಲಂಘನೆ, ಕರ್ತವ್ಯಲೋಪ, ದುರ್ನಡತೆ ಹಾಗೂ ಅಕ್ರಮಗಳನ್ನು ಎಸಗುವ ಮೂಲಕ ತಮ್ಮ ಸ್ಥಾನಮಾನವನ್ನು ಹಾಗೂ ಅಧಿಕಾರವನನ್ನು ದುರುಪಯೋಗಪಡಿಸಿಕೊಂಡಿರುವುದು ದೃಢವಾಗುವ ಮೇರೆಗೆ ಅವರನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಪ್ರಕರಣ ನಿಯಮ 6(1)(ಜಿ)ರಡಿ ಅಧ್ಯಕ್ಷರ ಪದದಿಂದ ತೆಗೆದು ಹಾಕುವುದು ಸೇರಿದಂತೆ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಅವರಿಗೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿಗೊಳಿಸಲು ಉದ್ದೇಶಿಲಾಗಿತ್ತು.

ಆದರೆ, ನಿಧನ, ರಾಜೀನಾಮೆ, ವಜಾ ಅಥವಾ ಅನ್ಯಥಾ ಕಾರಣದಿಂದ ಅಧ್ಯಕ್ಷರೂ ಸೇರಿದಂತೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯರ ಪದದಲ್ಲಿ ಉಂಟಾದ ಎಲ್ಲಾ ಆಕಸ್ಮಿಕ ಖಾಲಿ ಸ್ಥಾನಗಳಲ್ಲಿ ನಾಮ ನಿರ್ದೇಶನಗೊಳ್ಳುವ ವ್ಯಕ್ತಿಯು, ಮಂಡಳಿಯ ಯಾವ ಸದಸ್ಯನ ಸ್ಥಾನಕ್ಕೆ ನಾಮ ನಿರ್ದೇಶನಗೊಂಡಿರುವನೋ ಅಂಥ ಸದಸ್ಯನು ಆ ಪದದಲ್ಲಿ ಮುಂದುವರಿಯುತ್ತಿದ್ದಿರಬಹುದಾದಂಥ ಉಳಿದ ಅವಧಿಗೆ ಮಾತ್ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಪ್ರಕರಣ 5(6) ರನ್ವಯ ಪದಧಾರಣೆ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ತಿದ್ದುಪಡಿ ಸಂಖ್ಯೆ:**ಅಪಜೀ 143 ಇಪಿಸಿ 2020, ದಿನಾಂಕ:31.08.2023** ರನ್ವಯ ಶ್ರೀಶಾಂತ್ ಎ. ತಿಮ್ಮಯ್ಯ ಇವರ ಮಂಡಳಿಯ ಅಧ್ಯಕ್ಷರ ಹುದ್ದೆಯ ಪದಾವಧಿಯನ್ನು ದಿನಾಂಕ:04.03.2022ರಂದು ಮುಕ್ತಾಯಗೊಳಿಸಲಾಗಿದೆ. ಪದಾವಧಿಯನ್ನು ದಿನಾಂಕ:04.03.2022ರಂದು ಮುಕ್ತಾಯಗೊಳಿಸಿದ ಸರ್ಕಾರದ ತಿದ್ದುಪಡಿ ಸಂಖ್ಯೆ:ಅಪಜೀ 143 ಇಪಿಸಿ 2020, ದಿನಾಂಕ:31.08.2023ರನ್ನು ಹಾಗೂ ಕೆ.ಟಿ.ಪಿ.ಪಿ.ಕಾಯ್ದೆ ಉಲ್ಲಂಘನೆ ಮತ್ತು ಹಣ ದುರುಪಯೋಗದ ಬಗ್ಗೆ ಸರ್ಕಾರದಿಂದ ನಡೆಸಲಾದ ತನಿಖೆಯನ್ನು ಪ್ರಶ್ನಿಸಿ, ಶ್ರೀ ಶಾಂತ್ ಎ. ತಿಮ್ಮಯ್ಯ ಇವರಿಂದ ದಿನಾಂಕ:01.09.2023ರಂದು ದಾಖಲಿಸಲಾದ ರಿಟ್

ಅರ್ಜಿ ಸಂ: 19569/2023 ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ಪ್ರಶ್ನಿತ ತಿದ್ದುಪಡಿ ಅಧಿಸೂಚನೆಯನ್ನು ಅಮಾನತ್ತಿನಲ್ಲಿಟ್ಟು, ದಿನಾಂಕ:07.09.2023 ರಂದು ಮುಂದುವರೆದ ವಿಚಾರಣೆಯಲ್ಲಿ ಪ್ರಶ್ನಿತ ತಿದ್ದುಪಡಿ ಅಧಿಸೂಚನೆಗೆ ತಡೆಯಾಜ್ಞೆ ನೀಡಲಾಗಿತ್ತು ಹಾಗೂ ಅಧ್ಯಕ್ಷರು ದೈನಂದಿನ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅನುವು ಮಾಡಿ ಯಾವುದೇ ಕಾರ್ಯನೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಿರ್ಭಂದಿಸಲಾಗಿತ್ತು. ದಿನಾಂಕ:07.09.2023ರ ಆದೇಶದಲ್ಲಿ ಮಾನ್ಯ ನ್ಯಾಯಾಲಯದಿಂದ ಕೆಳಕಂಡಂತೆ ಸ್ಪಷ್ಟಪಡಿಸಲಾಗಿತ್ತು.

> " 9. We further make it clear that till this court hears the petitions on next scheduled date, the petitioner is permitted to act as the Chairman of Karnataka State Pollution Control Board and he may only conduct the activities in a limited sphere, i.e., day to day administration and is specifically directed not to take any policy decision without leave of the court. -----------"

ಸರ್ಕಾರದ ಅಧಿಸೂಚನೆ ಸಂಖ್ಯೆ:**ಅಪಜೀ 169 ಇಪಿಸಿ 2023, ದಿನಾಂಕ:26.07.2023**ರನ್ವಯ ತನಿಖಾಧಿಕಾರಿಯನ್ನಾಗಿ ನೇಮಿಸಲಾದ ಶ್ರೀ ಮಹದೇವ, ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋದನೆ ಮತ್ತು ಲೆಕ್ಕಪತ್ರ ಇಲಾಖೆ ಇವರು ತನಿಖೆ ನಡೆಸಿ ಸಲ್ಲಿಸಿದ ವರದಿಯನ್ನು ರಿಟ್ ಅರ್ಜಿಸಂ: 19569/2023 ರ ಪ್ರಕರಣದಲ್ಲಿ ಸಲ್ಲಿಸಲಾದ ಆಕ್ಷೇಪಣ ಹೇಳಿಕೆಯೊಂದಿಗೆ ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಾಗಿತ್ತು. ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣಾಧೀನವಾಗಿರುವ ಹಾಗೂ ಅಧ್ಯಕ್ಷರ ಪದಾವಧಿಯನ್ನು ಸರ್ಕಾರದ ತಿದ್ದುಪಡಿ ಸಂಖ್ಯೆ:**ಅಪಜೀ 143 ಇಪಿಸಿ 2020, ದಿನಾಂಕ:31.08.2023**ರನ್ವಯ ದಿನಾಂಕ:04.03.2022ರಂದು ಮುಕ್ತಾಯಗೊಳಿಸಲಾಗಿರುವ ಹಿನ್ನಲೆಯಲ್ಲಿ, ಕರ್ತವ್ಯ ಲೋಪ ಹಾಗೂ ಅಧಿಕಾರ ದುರುಪಯೋಗಕ್ಕೆ ಸಂಬಂಧಿಸಿದಂತೆ ಮಂಡಳಿಯ ಅಧ್ಯಕ್ಷ ಪದದಿಂದ ಅವರನ್ನು ತೆಗೆದು ಹಾಕುವುದು ಸೇರಿದಂತೆ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಅವರಿಗೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿಗೊಳಿಸಬಹುದಾಗಿದೆಯೇ ಹಾಗೂ ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದು ಈ ಕುರಿತು ಮುಂದುವರೆಯಬಹುದಾಗಿದೆಯೇ ಎಂಬಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು. ತನಿಖಾ ವರದಿಯ ಆಧಾರದ ಮೇಲೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ಎಸಗಿರುವ ಅಕ್ರಮ ಹಾಗೂ ದುರ್ನಡತೆಗೆ ಸಂಬಂಧಿಸಿದಂತೆ ಕಾರಣ ಕೇಳುವ ನೋಟೀಸ್ ನೀಡಲು ಕಾನೂನಿನ ತೊಡಕು ಇರುವುದಿಲ್ಲವೆಂದು ದಿನಾಂಕ:01.12.2023ರಂದು ಕಾನೂನು ಇಲಾಖೆಯಿಂದ ಅಭಿಪ್ರಾಯಪಡಲಾಗಿರುತ್ತದೆ.

ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ, ಸದಸ್ಯರುಗಳ ನಾಮ ನಿರ್ದೇಶನ ಹಾಗೂ ಅವರ ಸೇವಾ ಷರತ್ತು ಮತ್ತು ನಿಬಂಧನೆಗಳು ಹಾಗೂ ಸದಸ್ಯ ಕಾರ್ಯದರ್ಶಿಯ ನೇಮಕಾತಿ ಕುರಿತಂತೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಉಪಬಂಧಗಳನುಸಾರವಾಗಿ ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದ ಸರ್ಕಾರದ ಆದೇಶ ಸಂಖ್ಯೆ:ಎಫ್‌ಇಇ 230 ಇಪಿಸಿ 2017, ದಿನಾಂಕ:19.06.2020ನ್ನು ಹಾಗೂ ಶ್ರೀಶಾಂತ್ ಎ. ತಿಮ್ಮಯ್ಯ ಇವರನ್ನು ಮಂಡಳಿಯ ಅಧ್ಯಕ್ಷರ ಹುದ್ದೆಗೆ ನಾಮ ನಿರ್ದೇಶಿಸಿದ ಕ್ರಮವನ್ನು ಪ್ರಶ್ನಿಸಿ ದಾಖಲಿಸಲ್ಪಟ್ಟು ಇತ್ಯರ್ಥಕ್ಕಾಗಿ ಬಾಕಿ ಇದ್ದ ರಿಟ್ ಅರ್ಜಿ ಪ್ರಕರಣಗಳನ್ನು ರಿಟ್‌ಅರ್ಜಿಸಂ: 19569/2023 ರ ಪ್ರಕರಣದೊಂದಿಗೆ ಒಗ್ಗೂಡಿಸಿ ವಿಚಾರಣೆಯನ್ನು ದಿನಾಂಕ:07.11.2023 ರಂದು ಪೂರ್ಣಗೊಳಿಸಿದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:29.03.2023ರಂದು ಅಂತಿಮ ತೀರ್ಪನ್ನು ಜಾರಿಗೊಳಿಸಿರುತ್ತದೆ. ಈ ತೀರ್ಪಿನಲ್ಲಿ, ಶ್ರೀಶಾಂತ್ ಎ. ತಿಮ್ಮಯ್ಯ ಇವರ ಮಂಡಳಿಯ ಅಧ್ಯಕ್ಷರ ಹುದ್ದೆಯ ಪದಾವಧಿಯನ್ನು ದಿನಾಂಕ:04.03.2022ರಂದು ಮುಕ್ತಾಯಗೊಳಿಸಿದ ಸರ್ಕಾರದ ತಿದ್ದುಪಡಿ

ಸಂಖ್ಯೆ:ಅಪಜೀ 143 ಇಪಿಸಿ 2020, ದಿನಾಂಕ:31.08.2023ರನ್ನು ಅಸಿಂಧುಗೊಳಿಸಿ ಹಾಗೂ ಸರ್ಕಾರದ ತನಿಖೆಗೆ ಶ್ರೀಶಾಂತ್ ಎ. ತಿಮ್ಮಯ್ಯ ಇವರು ದಾಖಲಿಸಿದ ಆಕ್ಷೇಪಣೆಯನ್ನು ತಿರಸ್ಕರಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ORDER**

[i] A Writ of Mandamus issues to the respondent-State Government to reframe Clauses 7, 10 & 11 in the ANNEXURE to the Government Order No.FEE 230 EPC2017 Bengaluru, Dated:31.08.2023, in terms of our observations at Paragraph (VI) of this judgement andreport compliance to the Registrar General of the court,within an outer limit of three months.

[ii] The challenge to the selection, nomination and appointment of Dr.Shanth A. Thimmaiah as the Chairman of the KSPCB pursuant to Notification No.FEE 143 EPC 2020 dated 15.11.2021, is liable to be and accordingly, rejected.

[iii] The challenge by the petitioner Dr.ShanthA.Thimmaiah to the Corrigendum E.No.FEE 143 EPC 2020 dated 31.08.2023 and Government Order No.FEE 143 EPC2020 dated 31.08.2023 is favoured and a Writ of Certiorari issues quashing the same. As a consequence, his tenure as the Chairman of the KSPCB is secured till 14.11.2024.

[iv] Petitioner Dr.Shanth A. Thimmaiah's challenge to the communication No.AAPAJI/169/EPC/2023 dated:26.07.2023 whereby, enquiry is initiated against him for the alleged lapses, being devoid of merits, is liable to be and accordingly, dismissed. As a consequence, the said enquiry shall be accomplished in accordance with law.

Costs made easy.

ಆದುದರಿಂದ, ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣ ಕುರಿತು ಅರಿವು / ಜಾಗೃತಿ ಮೂಡಿಸಲು ಹಮ್ಮಿಕೊಳ್ಳಲಾದ ಕಾರ್ಯಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಉಪಬಂಧಗಳನ್ನು ಉಲ್ಲಂಘನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಕಾರಣ ಕೇಳುವ ನೋಟಿಸ್ ಜಾರಿಗೊಳಿಸಿ ಶ್ರೀ ಶಾಂತ್ ಎ. ತಿಮ್ಮಯ್ಯ ಇವರಿಂದ ವಿವರಣೆ ಪಡೆದು ಅವರ ವಿರುದ್ಧ ಕಾನೂನಾತ್ಮಕ ಕ್ರಮವನ್ನು ಜರುಗಿಸಲಾಗುವುದು.

(signature)

**(ಈಶ್ವರ್ ಬಿ. ಖಂಡ್ರೆ)**

**ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು**

ಎಫ್‌ಇಇ/ 270 /ಇಪಿಸಿ/2023